ಸಿ.ಸಿ .ನಂ.159/2022 ಪಿಡಬ್ಲೂಃ 1

ದಿನಾಂಕಃ 01-08-2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಪಿ ಎಸ್ ಎನ್ ವಕೀಲರಿಂದಃ**

10. ವಾಹನ ಸಂಖ್ಯೆ ಕೆಎ 07/8592 ಈಗ ಯಾರ ವಶದಲ್ಲಿದೆ ಎಂದರೆ ಸಾಕ್ಷಿ ಹರಾಜಿನಲ್ಲಿ ದಿಲೀಪರವರು ಖರೀದಿ ಮಾಡಿದ್ದರು, ಆದರೆ ಸರಿಯಾಗಿ ಹಣ ಕಟ್ಟದ ಕಾರಣ ಮತ್ತೆ ಸದರಿ ವಾಹನವನ್ನು ಸೀಜ್ ಮಾಡಿ ಮತ್ತೇ ಹರಾಜು ಮಾಡಿರುತ್ತೇವೆ. ಈಗ ಅದನ್ನು ಬೇರೆಯವರು ಖರೀದಿ ಮಾಡಿದ್ದಾರೆ . ಈಗ ಸದರಿ ವಾಹನ ಬೇರೆಯವರ ವಶದಲ್ಲಿದೆ. ವಾಹನವನ್ನು ಹರಾಜಿನಲ್ಲಿ ಖರೀದಿ ಮಾಡಿದವರು ಎರಡುವರೆ ಲಕ್ಷಕ್ಕೆ ಖರೀದಿಸಿರುತ್ತಾರೆ . ನಾವು ಹರಾಜನ್ನು ಎರಡು ಬಾರಿ ಮಾಡಿರುತ್ತೇವೆ . ಸೇವರಲೆ ಎಂಜೋಯಸ್ ವಾಹನವನ್ನು ಬೇರೆಯವರು ಎರಡನೇ ಹರಾಜಿನಲ್ಲಿ ಖರೀದಿಸಿರುತ್ತಾರೆ . ಎರಡನೇ ಬಾರಿಯ ಹರಾಜು ಯಾವ ದಿನಾಂಕದಂದು ಆಯಿತು ದಾಖಲಾತಿ ನೋಡಿ ಹೇಳಬೇಕು . ಎರಡನೇ ಬಾರಿ ಎಷ್ಟು ಮೊತ್ತಕ್ಕೆ ವಾಹನ ಹರಾಜು ಆಯಿತು ಆ ಬಗ್ಗೆ ಅಕೌಂಟ್ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿ . ಯಾವುದೇ ಸಾಲಗಾರರ ವಾಹನವನ್ನು ಜಪ್ತು ಮಾಡಿ ಹರಾಜಿನಲ್ಲಿ ಮಾರಾಟ ಮಾಡಿದಾಗ ಮಾರಾಟದಿಂದ ಬಂದ ಹಣವನ್ನು ಸಾಲಗಾರರ ಸಾಲದ ಖಾತೆಗೆ ಹಾಕುತ್ತೇವೆ ಎಂದರೆ ಸರಿ . ಈ ಪ್ರಕರಣವನ್ನು ದಾಖಲಿಸುವ ಎಷ್ಟು ತಿಂಗಳ ಮೊದಲು ಎರಡನೇ ಬಾರಿ ಹರಾಜನ್ನು ಮಾಡಿರುತ್ತೇವೆ ದಿನಾಂಕ ನೆನಪಿಲ್ಲ . ವಾಹನವನ್ನು ಜಪ್ತು ಮಾಡುವ ಬಗ್ಗೆ ಆರೋಪಿಗೆ ನೋಟಿಸನ್ನು ಕೊಟ್ಟಿದ್ದೆವು . ನೋಟಿಸು ನೀಡಿದ 7 ದಿನಗಳ ನಂತರ ವಾಹನವನ್ನು ಜಪ್ತಿ ಮಾಡಿರುತ್ತೇವೆ . ಆರೋಪಿಗೆ ಎರಡು ಸಲ ನೋಟಿಸನ್ನು ನೀಡಿರುತ್ತೇವೆ . ಮೊದಲನೇ ನೋಟಿಸನ್ನು ಯಾವ ದಿನಾಂಕದಂದು ನೀಡಿರುತ್ತೇವೆ ನಿಖರವಾದ ದಿನಾಂಕ ನೆನಪಿಲ್ಲ . ಮೊದಲನೇ ನೋಟಿಸನ್ನು ನೀಡಿದ 15 ದಿನಗಳ ನಂತರ ಎರಡನೇ ನೋಟಿಸನ್ನು ನೀಡಿರುತ್ತೇವೆ .

11. ಹರಾಜು ಪ್ರಕ್ರಿಯೆ ಮಾಡುವಾಗ ಅದರದೇ ನಿಯಮಗಳಿರುತ್ತವೆ ಎಂದರೆ ಸರಿ . ಹರಾಜಿನಲ್ಲಿ ಭಾಗವಹಿಸುವವರು 20% ಹಣವನ್ನು ಡೆಪೋಜಿಟ್ ಮಾಡಬೇಕಿತ್ತು . ಬಿಡ್ ಮಾಡಿ ವಿನ್ ಆದ ಮೊತ್ತಕ್ಕೆ 20% ಬ್ಯಾಂಕಿಗೆ ತುಂಬಬೇಕು . ವಾಹನದ ಹರಾಜು ಪ್ರಕ್ರಿಯೆಯಲ್ಲಿ ಎಷ್ಟು ಜನ ಭಾಗವಹಿಸಿದ್ದರು ನಿಖರವಾಗಿ ಗೊತ್ತಿಲ್ಲ . ಹರಾಜಿನಲ್ಲಿ ಭಾಗವಹಿಸುವವರು ವಾಹನದ ದಾಖಲಾತಿಗಳನ್ನು ನೋಡಿ ಹರಾಜಿನಲ್ಲಿ ಭಾಗವಹಿಸುತ್ತಾರೆ ಎಂದರೆ ಸರಿ . ಹರಾಜು ಸಮಯದಲ್ಲಿ ವಾಹನದ ದಾಖಲಾತಿಗಳು ನಮ್ಮ ಬಳಿ ಇರಲಿಲ್ಲ. ಮೂಲ ದಾಖಲಾತಿಗಳನ್ನು ನೋಡದೆ ಯಾರು ಹರಾಜಿನಲ್ಲಿ ಭಾಗವಹಿಸುವುದಿಲ್ಲ ಎಂದರೆ ಸಾಕ್ಷಿ ನಮ್ಮ ಬಳಿ ಮೂಲ ದಾಖಲಾತಿ ಇಲ್ಲ , ಹರಾಜಿನಲ್ಲಿ ಬಿಡ್ ಆದ ನಂತರ ನಿವೇ ದಾಖಲಾತಿಯನ್ನು ವರ್ಗಾವಣೆ ಮಾಡಿಕೊಳ್ಳಬೇಕು ಎಂದು ನಾವು ಅವರಿಗೆ ಹೇಳಿದ್ದೆವು ಎಂದು ನುಡಿದಿರುತ್ತಾರೆ . ಹರಾಜಿನ ಶರತ್ತುಗಳು ಲಿಖಿತ ರುಪದಲ್ಲಿ ಇರುತ್ತವೆ ಎಂದರೆ ಸರಿ . ಸದರಿ ಶರತ್ತುಗಳಲ್ಲಿ ವಾಹನದ ವರ್ಗಾವಣೆಯ ಬಗ್ಗೆ ಶರತ್ತು ಇತ್ತು . ಯಾವುದೇ ಮೂಲ ದಾಖಲಾತಿಗಳು ಇಲ್ಲದೇ ವಾಹನದ ಮಾಲೀಕರು ಅಥವಾ ವಾಹನವನ್ನು ಜಪ್ತಿ ಪಡಿಸಿಕೊಂಡ ಬ್ಯಾಂಕಿನವರು ಅನುಮತಿ ಇಲ್ಲದೇ ಬೇರೆಯವರಿಗೆ ವರ್ಗಾವಣೆ ಮಾಡಲು ಆಗುವುದಿಲ್ಲ ಎಂದರೆ ಸರಿ . ಹರಾಜಿನಲ್ಲಿ ವಾಹನವನ್ನು ಖರೀದಿಸಿದ ವ್ಯಕ್ತಿಗೆ ವಾಹನ ವರ್ಗಾವಣೆ ಮಾಡಿ ಕೊಡುವುದು ಬ್ಯಾಂಕಿನ ಜವಾಬ್ದಾರಿ ಎಂದರೆ ಸಾಕ್ಷಿ ನಾವು ಅವರಿಗೆ ಅವರೇ ವರ್ಗಾವಣೆ ಮಾಡಿಕೊಳ್ಳಬೇಕು ಎಂದು ತಿಳಿಸಿದ್ದೆವು ಎಂದು ನುಡಿದಿರುತ್ತಾರೆ . ಆರೋಪಿಗೆ ವಾಹನದ ಕಬ್ಜಾ ಕೊಟ್ಟ ಬಗ್ಗೆ ಲಿಖಿತ ದಾಖಲಾತಿ ನಮ್ಮ ಬ್ಯಾಂಕಿನಲ್ಲಿ ಇದೆ . ಆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ . ಹರಾಜು ಪ್ರಕ್ರಿಯೆಯಲ್ಲಿ ಬಿಡ್ಡರ್ ಗೆ ಯಾವ ಯಾವ ದಾಖಲಾತಿಗಳನ್ನು ನೀಡಿದ್ದೇವೆ , ಆ ಬಗ್ಗೆ ನಮ್ಮ ಬಳಿ ದಾಖಲಾತಿ ಇದೆ . ಎರಡನೇ ಬಾರಿ ಎಷ್ಟು ಮೊತ್ತಕ್ಕೆ ವಾಹನ ಬಿಡ್ ಆಗಿದೆ ಆ ಬಗ್ಗೆ ನಿಖರವಾದ ದಾಖಲಾತಿ ನಮ್ಮ ಬ್ಯಾಂಕಿನಲ್ಲಿ ಇದೆ ಎಂದರೆ ಸರಿ . ಆ ದಾಖಲಾತಿಗಳು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರ ವಿನಂತಿ ಮೇರೆಗೆ  ಪಾಟೀ ಸವಾಲನ್ನು ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.